# ದಗ್ಧ ಕರ್ಮಗಳು-ಪರಿಶುದ್ಧ ಕರ್ಮಗಳು

ನಾವು ನಮ್ಮ ಹುಟ್ಟಿನಿಂದ ಸಾವಿನವರೆಗೂ ಪ್ರತಿದಿನ ಅನೇಕ ಕರ್ಮಗಳನ್ನು ಮಾಡುತ್ತಲೇ ಇರುತ್ತೇವೆ. ಆದರೆ ನಮಗೆ ಕರ್ಮವೆಂದರೇನು? ಕರ್ಮವನ್ನು ನಾವು ಹೇಗೆ ಮಾಡಿದರೆ, ಕರ್ಮ ಮತ್ತು ವಿಧಿಲಿಖಿದ ಅತೀತ ತಲುಪುತ್ತೇವೆ? ನಾವು ಸಿಲುಕಿರುವ ಪಾಪ-ಪುಣ್ಯಗಳೆನ್ನುವ ಚಕ್ರದಿಂದ ಹೊರಗಿದ್ದು ನಮ್ಮ ಕರ್ಮಗಳನ್ನು ದಗ್ಧ ಗೊಳಿಸುವುದು ಹೇಗೆ? ಆನಂದಕರದ ಜೀವನವನ್ನು ಹೇಗೆ ಪಡೆಯಬೇಕು? ಎನ್ನುವ ಅನೇಕ ವಿಷಯಗಳು ನಮಗೆ ತಿಳಿಯದು. ಇವುಗಳ ಬಗ್ಗೆ ಸ್ಪಷ್ಟವಾದ ಅರಿವು ಇಲ್ಲದಿದ್ದರೂ ಸಹ ಪ್ರತಿದಿನ ನಾವು ನಮಗೆ ತೋಚಿದ ರೀತಿಯಲ್ಲಿ ಕರ್ಮಗಳನ್ನು ಮಾಡುತ್ತಾ, ನಾವು ಬಯಸಿದ್ದು ನಡೆಯದಿದ್ದರೆ, ಅಯ್ಯೋ, ಎಲ್ಲಾ ನಮ್ಮ ಕರ್ಮ, ಹಣೆಬರಹ ಎಂದು ಹೇಳಿಕೊಂಡು ಅದಕ್ಕೆ ಹೊಂದಿಕೊಂಡು ಹೋಗುತ್ತಿದ್ದೇವೆ. ಇವುಗಳ ಬಗ್ಗೆ ಅನುಭವಪೂರ್ವಕವಾಗಿ ತಿಳಿದುಕೊಂಡಿರುವುದನ್ನು ಈಗ ನಿಮಗೆ ವಿವರಿಸುತ್ತೇನೆ.

ಪ್ರತಿ ಆತ್ಮಕ್ಕೂ ಬ್ರಹ್ಮ, ವಿಷ್ಣು, ಮಹೇಶ್ವರ ತತ್ವಗಳು ಇರುತ್ತವೆ. ಆದರೆ ಜೀವಾತ್ಮಗಳಾದ ನಾವು ಈ ವಿಷಯವನ್ನು ಮರೆತು ಅಸಂಪೂರ್ಣರಾಗಿ ಜೀವಿಸುತ್ತಿದ್ದೇವೆ. ಹೇಗೆ, ಒಂದು ಅಣುವಿನಲ್ಲಿ ಎಲೆಕ್ಟ್ರಾನ್, ಪ್ರೋಟಾನ್, ನ್ಯೂಟ್ರಾನ್ ಗಳು ಒಟ್ಟಾಗಿ ಕೂಡಿರುತ್ತವೆಯೋ ಅದೇ ವಿಧದಲ್ಲಿ ಪ್ರತಿಯೊಂದು ಕರ್ಮದಲ್ಲೂ ಸೃಷ್ಟಿಸುವುದು, ಮುನ್ನಡೆಸುವುದು ಮತ್ತು ನಾಶ ಮಾಡುವುದು ಎನ್ನುವ 3 ಸ್ಥಿತಿಗಳು ಸಮಾನ ಅನುಪಾತದಲ್ಲಿ ಇರುತ್ತವೆ. ಈ ಜಗತ್ತಿನಲ್ಲಿ ಪ್ರತಿಯೊಂದು ಅಣುವು ಈ 3 ಸ್ಥಿತಿಗಳನ್ನು ಒಳಗೊಂಡಿರುತ್ತದೆ. ಇವುಗಳನ್ನೇ ನಾವು ಒಳ್ಳೆಯ-ಕೆಟ್ಟ-ತಟಸ್ಥ ವೆಂದೂ, ಅಥವಾ ತಮೋ-ರಜೋ-ಸತ್ವ ಗುಣಗಳೆಂದೂ ಸಹ ಹೇಳಬಹುದು. ಬ್ರಹ್ಮನು ಸತ್ವ ಗುಣಕ್ಕೆ, ವಿಷ್ಣುವು ರಜೋ ಗುಣಕ್ಕೆ ಮತ್ತು ಈಶ್ವರನು ತಮೋ ಗುಣಕ್ಕೆ ಅಧಿಪತಿಗಳಾಗಿದ್ದಾರೆ. ಆದುದರಿಂದ ಈ ಮೂವರು ಪರಸ್ಪರ ಒಟ್ಟಾಗಿ ಸೇರಿ ಅನ್ಯೋನ್ಯವಾಗಿ ಕಾರ್ಯವನ್ನು ನಿರ್ವಹಿಸಿದರೆ ಮನುಷ್ಯನ ಜೀವನವು ಸಂಪೂರ್ಣವೆನಿಸುತ್ತದೆ.

ಬ್ರಹ್ಮನ ಕೆಲಸ ಕರ್ಮಗಳನ್ನು ಸೃಷ್ಟಿಸುವುದು. ಉದಾಹರಣೆಗೆ, ತೆಗಳು ಎನ್ನುವ ಆಲೋಚನೆ ನನ್ನಲ್ಲುಂಟಾಯಿತು ಎಂದರೆ ಇದನ್ನು ನನ್ನಲ್ಲಿರುವ ಬ್ರಹ್ಮನು ಸೃಷ್ಟಿಸಿದ್ದಾನೆ ಎಂದರ್ಥ. ಅದೇ ರೀತಿ ಕರ್ಮವನ್ನು ಮುನ್ನಡೆಸುವುದು ವಿಷ್ಣುವಿನ ಕೆಲಸ ಎಂದರೆ ಆ ನಿಂದನೆಗೆ ಬೇಕಾದ ಶಕ್ತಿ ಸಾಮರ್ಥ್ಯಗಳನ್ನು ನೀಡಿ ಅದನ್ನು ಮುನ್ನಡೆಸುತ್ತಾನೆ. ಹಾಗೆಯೇ ಕರ್ಮವನ್ನು ನಾಶ ಮಾಡುವುದು ಇಲ್ಲವೇ ಸುಟ್ಟು ದಗ್ಧ ಮಾಡುವುದು ಈಶ್ವರನ ಕೆಲಸ.

ಆದರೆ ಆಲೋಚನೆ ಉಂಟಾದ ತಕ್ಷಣವೇ ನೀವು ಕರ್ಮವನ್ನು ಆಚರಿಸಿದರೆ, ಆ ಕರ್ಮವು ನಿಮ್ಮ ಮನಸ್ಸಿನಲ್ಲಿ ಸಂಗ್ರಹವಾಗುತ್ತದೆ. ಅದೇ ರೀತಿ ಕೇವಲ ಈ ಒಂದು ಕಾರ್ಯದಿಂದಾಗಿ ಕೆಲವರಿಗೆ ಒಳ್ಳೆಯದು ಮತ್ತು ಕೆಲವರಿಗೆ ಕೆಡುಕು ಸಂಭವಿಸುತ್ತದೆ. ಉದಾಹರಣೆಗೆ, ನೀವು ಶಾಖಾಹಾರಿಯಾಗಿದ್ದು ಮಾಂಸಾಹಾರವನ್ನು ದ್ವೇಷಿಸಿದರೆ- ನಿಮಗೆ ಶಾಖಾಹಾರಿಗಳ ಪರವಾಗಿ ರಾಗ ಹಾಗೂ ಮಾಂಸಾಹಾರಿಗಳ ಪರವಾಗಿ ದ್ವೇಷವು ಉಂಟಾಗುತ್ತದೆ. ಇದರಿಂದಾಗಿ ಕೆಲವರಿಗೆ ಶತ್ರುಗಳಾಗಿ ಇನ್ನೂ ಕೆಲವರಿಗೆ ಸ್ನೇಹಿತರಾಗಿ ತಯಾರಾಗುತ್ತಿದ್ದಾರೆ. ಎಂದರೆ ಒಮ್ಮೆಲೇ ಒಳ್ಳೆಯ ಹಾಗೂ ಕೆಟ್ಟ ಕರ್ಮವನ್ನು ಮಾಡುತ್ತಾ ಅದಕ್ಕೆ ತಕ್ಕ ಪ್ರತಿಫಲವನ್ನು ಪಡೆಯುತ್ತಾ ಅವುಗಳಲ್ಲೇ ಸಿಲುಕಿಕೊಳ್ಳುತ್ತಿದ್ದಾರೆ.

ಇದಕ್ಕೆ ಪರಿಹಾರವೇನೆಂದರೆ ಜ್ಞಾನದ ಅಗ್ನಿಯನ್ನು ಹೊತ್ತಿಸಿ ಅದರಲ್ಲಿ ಪೂರ್ವದ ಕರ್ಮಗಳೆಲ್ಲವನ್ನೂ ದಗ್ಧ ಮಾಡುವುದು. ಹೀಗೆ ಮಾಡಬೇಕೆಂದರೆ ನೀವು ಈಶ್ವರನ ತತ್ವವನ್ನು ಸಹ ಉಪಯೋಗಿಸಿಕೊಳ್ಳಬೇಕಾಗುತ್ತದೆ. ಆದರೆ ನಿಮ್ಮ ಜೀವನದಲ್ಲಿ ನೀವು ಕೇವಲ ಬ್ರಹ್ಮ ಮತ್ತು ವಿಷ್ಣುವಿನ ತತ್ವವನ್ನು ಮಾತ್ರ ಉಪಯೋಗಿಸಿಕೊಳ್ಳುತ್ತಿರುವಿರಿ.

ಶಿವತತ್ವವನ್ನು ಉಪಯೋಗಿಸಿಕೊಳ್ಳುತ್ತಿಲ್ಲ. ಎಂದರೆ ಸೃಷ್ಟಿಸಿರುವುದನ್ನು ಮುನ್ನಡೆಸುವುದರಲ್ಲಿಯೇ ನೀವು ನಿಮ್ಮ ಗಮನವನ್ನು ಹರಿಸುತ್ತಿರುವಿರಿ ಆದರೆ ಸೃಷ್ಟಿಸಿರುವುದನ್ನು ನಾಶಗೊಳಿಸುವುದು ಹೇಗೆ ಎನ್ನುವುದರ ಬಗ್ಗೆ ನೀವು ಆಲೋಚಿಸುತ್ತಿಲ್ಲ.

ಶಿವನು, ಯಾವುದಾದರೂ ಕಾರ್ಯ ಅಥವಾ ಕರ್ಮದ ಅವಧಿ ಮುಗಿದ ಮೇಲೆ ಅವನು ಅದನ್ನು ನಾಶ ಮಾಡುತ್ತಾನೆ. ಶಿವನು ಲಯಕಾರಕ ತತ್ವಕ್ಕೆ ಅಧಿಪತಿಯಾಗಿದ್ದು ಆ ಪಾತ್ರವನ್ನು ಪೋಷಿಸುತ್ತಾನೆ. ಡಿಲೀಟ್ ಆಪ್ಷನ್ ಅಥವಾ ಶಿವ ತತ್ವವೆನ್ನುವುದು ನಮಗೆ ತುಂಬಾ ಅಗತ್ಯವಾದುದು. ಏಕೆಂದರೆ ಹುಟ್ಟಿದ್ದು ಯಾವುದೇ ಆಗಲಿ ನಶಿಸಲೇಬೇಕು. ಇದೇ ಈ ಸೃಷ್ಟಿಯ ನಿಯಮ. ಆದರೆ ಅಜ್ಞಾನದಲ್ಲಿ ಅರಿಯದೇ ನೀವು ಶಿವತತ್ವವನ್ನೇ ದ್ವೇಷಿಸುತ್ತಿದ್ದೀರಿ. ಇಂದಿನಿಂದ ಇದನ್ನು ಉಪಯೋಗಿಸಿಕೊಳ್ಳುವುದಕ್ಕೆ ಪ್ರಾರಂಭಿಸಿರಿ. ನಮ್ಮೊಳಗೆ ಡಿಲೀಟ್ ಆಪ್ಷನ್ ಇದೆ. ಎಂದರೆ ನಮ್ಮೊಳಗೆ ಬ್ರಹ್ಮ-ವಿಷ್ಣು-ಮಹೇಶ್ವರರ ತತ್ವಗಳು ಇವೆಯೆಂದು ಗ್ರಹಿಸಿರಿ.

ನೀವು ಪರಿಶುದ್ಧಗೊಳ್ಳಬೇಕೆಂದರೆ ಡಿಲೀಟ್ ಆಪ್ಷನ್ ಅನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆನ್ನುವುದನ್ನು ತಪ್ಪದೇ ತಿಳಿದುಕೊಳ್ಳಬೇಕು. ನಿಮಗೆ, ಯಾರನ್ನಾದರೂ ತೆಗಳು ಎನ್ನುವ ಆಲೋಚನೆ ಉಂಟಾದ ತಕ್ಷಣ ಹೊರಗಡೆಯಿಂದ (ಬಾಹ್ಯದಲ್ಲಿ) ತೆಗಳದೇ ಅಂತರಂಗದಲ್ಲಿ ತೆಗಳುತ್ತೇನೆ, ಹೊಗಳುತ್ತೇನೆ, ನ್ಯೂಟ್ರಲ್ ಎಂದು ಮೂರನ್ನು ಆಯ್ಕೆ ಮಾಡಿಕೊಳ್ಳಿರಿ. ಎಂದರೆ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಆಯ್ಕೆ ಮಾಡಿಕೊಳ್ಳಿರಿ. ಅದೇ ರೀತಿ ತ್ರಿಮೂರ್ತಿಗಳ ಮಿಲನದ ಸ್ಥಿತಿಗೆ ತಲುಪಿದ ನಂತರ, ತೆಗಳುತ್ತೇನೆ ಎಂದು ಆ ಆಲೋಚನೆಗೆ ಹೇಳಿ, ನೀವು ಪ್ರಶಾಂತವಾದ ಸ್ಥಿತಿಯನ್ನು ತಲುಪಿದ ನಂತರ ನಿಮಗೇನು ಮಾಡಬೇಕೆಂದು ತೋಚುತ್ತದೋ ಅದನ್ನು ಮಾಡಿರಿ.

ನೀವು ಪ್ರತಿದಿನವೂ ಈ ರೀತಿಯಲ್ಲಿ ಸಾಧನೆಯನ್ನು ಮಾಡಿದರೆ, ತಪ್ಪದೇ ನಿಮ್ಮಲ್ಲಿ ಯಾವ ಆಲೋಚನೆ ಉಂಟಾದರೂ ತಕ್ಷಣ ಸ್ಪಂದಿಸದಿರುವ ಎಂದರೆ ಪ್ರತಿಕ್ರಿಯಿಸದಿರುವ ಸ್ಥಿತಿಯನ್ನು ತಲುಪುತ್ತೀರಿ. ಯಾವಾಗ ನೀವು ರಾಗ-ದ್ವೇಷಗಳಿಗೆ ಅತೀತವಾಗಿ ತಲುಪಿ ಕರ್ಮಗಳನ್ನು ಮಾಡುತ್ತೀರೋ ಅಂದರೆ ನಿರ್ದೇಶಕನಂತೆ ಇದ್ದು ಪಾತ್ರಗಳನ್ನು ಪೋಷಿಸುತ್ತೀರೋ ಆಗ ನಿಮ್ಮ ಕರ್ಮಗಳೆಲ್ಲವೂ ದಗ್ಧ ಕರ್ಮಗಳಾಗುತ್ತವೆ, ಎಂದರೆ ಪರಿಶುದ್ಧ ಕರ್ಮಗಳಾಗುತ್ತವೆ.

ನಾನು ಕ್ಲಾಸ್ ನಲ್ಲಿ ವಿಷಯಗಳನ್ನು ಹೇಳುತ್ತಿರುವಾಗ, ಎಲ್ಲರನ್ನೂ ಬೈಯುತ್ತಾ ಇರುತ್ತೇನೆ, ಹೊಗಳುತ್ತಲೂ ಇರುತ್ತೇನೆ ಮತ್ತು ಎಲ್ಲಾ ರೀತಿಯ ಪದಗಳನ್ನು ಉಪಯೋಗಿಸುತ್ತಿರುತ್ತೇನೆ. ಆ ಕ್ಲಾಸ್ ನಲ್ಲಿ ಎಲ್ಲಾ ತರಹದವರು ಇರುತ್ತಾರೆ. ವೈದ್ಯರು, ರೋಗಿಗಳು, ವಿಜ್ಞಾನಿಗಳು, ವಿದ್ಯಾರ್ಥಿಗಳು ಹಾಗೂ ಮನೆಮಂದಿಯರು ಇರುತ್ತಾರೆ. ಎಲ್ಲರೂ ಅವುಗಳನ್ನೆಲ್ಲಾ ತಮಾಷೆಯಾಗಿ, ಸಹಜತೆಯಿಂದ ಸ್ವೀಕರಿಸುತ್ತಾ ನಾನು ಹೇಳುವ ವಿಷಯಗಳನ್ನು ಕೇಳುತ್ತಿರುತ್ತಾರೆ. ಸಾಧಾರಣವಾಗಿ, ನಾವು ಯಾರನ್ನಾದರೂ ಬೈದರೆ ಅವರು ಸುಮ್ಮನೆ ಇರುತ್ತಾರಾ? ಯಾರೂ ಸುಮ್ಮನಿರುವುದಿಲ್ಲ. ಆದರೆ ನಾನು ಬೈದರೂ ಸಹ ಪ್ರತಿಯೊಬ್ಬರೂ ತಮಾಷೆಯಾಗಿ ಸ್ವೀಕರಿಸುತ್ತಿದ್ದಾರೆ. ಏಕೆಂದರೆ ನಾನು ಸ್ವಚ್ಛವಾಗಿದ್ದು ಕರ್ಮವನ್ನು ಮಾಡುತ್ತೇನೆ. ಬ್ರಹ್ಮ, ವಿಷ್ಣು, ಮಹೇಶ್ವರರ ಮಿಲನದ ಸ್ಥಿತಿಯಲ್ಲಿದ್ದು ಬೈಯುತ್ತೇನೆ. ನನ್ನ ಬೈಗಳು ಅಥವಾ ಹೊಗಳಿಕೆಗಳು ಬ್ರಹ್ಮನ ಮೂಲಕ ಸೃಷ್ಟಿಸಲ್ಪಡುತ್ತವೆ ಅದೇ ಸಮಯದಲ್ಲಿ ವಿಷ್ಣುವಿನ ಮೂಲಕ ಮುನ್ನಡೆಸಲ್ಪಡುತ್ತವೆ ಹಾಗೂ ಅದೇ ಸಮಯದಲ್ಲಿ ಶಿವನ ಮೂಲಕ ನಾಶ ಮಾಡಲ್ಪಡುತ್ತವೆ. ಇದನ್ನೇ ದಗ್ಧ ಕರ್ಮಗಳು, ಪರಿಶುದ್ಧ ಕರ್ಮಗಳು ಎನ್ನುತ್ತಾರೆ.

ಎಂದರೆ ನನ್ನ ಮನಃಪಟಲದಲ್ಲಿ (Memory cord) ದಗ್ಧ ಕರ್ಮಗಳಿಗೆ ಸಂಬಂಧಿಸಿದ ಯಾವ ವಿಷಯವೂ ಸಂಗ್ರಹವಾಗುವುದಿಲ್ಲ. ಒಂದು ವೇಳೆ ನಾನು ಈ ಸ್ಥಿತಿಯಲ್ಲಿದ್ದು ಕರ್ಮವನ್ನು ಮಾಡದೇ ಇದ್ದರೆ ಆಗ ಅವು ನನ್ನ ಅಂತರಂಗದಲ್ಲಿ ಸಂಗ್ರಹವಾಗುತ್ತವೆ. ಅದನ್ನು ನಾನು ಗುರುತಿಸಿ ಆ ಕರ್ಮಗಳೆಲ್ಲವನ್ನೂ ಪ್ರಶಾಂತವಾಗಿ ದಿವ್ಯವಾಗಿ ನೋಡುವ ಸ್ಥಿತಿಯನ್ನು ತಲುಪುವವರೆಗೆ ಮತ್ತೇ ಮತ್ತೇ ಅನುಭವಿಸಿ ದಗ್ಧ ಮಾಡುತ್ತೇನೆ. ನಾವು ಮಾಡುವ ಕರ್ಮಗಳು ಅಂತರಂಗದಲ್ಲಿ ಡಿಲೀಟ್ ಆಗದೇ ಇರುವುದರಿಂದಾಗಿ ಬಾಹ್ಯದಲ್ಲಿ ಅವುಗಳಿಗೆ ಸಂಬಂಧಪಟ್ಟ ಕರ್ಮಗಳು ಮರುಕಳಿಸುತ್ತಲೇ ಇರುತ್ತವೆ. ಡಿಲೀಟ್ ಮಾಡಿದ ನಂತರ ಆ ಸಮಸ್ಯೆ ಮಾಯವಾಗಿ ಬಿಡುತ್ತದೆ. ಡಿಲೀಟ್ ಮಾಡುವುದರ ಬಗ್ಗೆ ಇನ್ನಷ್ಟು ಮಾಹಿತಿಯನ್ನು ಪಡೆಯಲು "ಅಂತರ್ ಪ್ರಯಾಣ" ಟಾಪಿಕ್ ಅನ್ನು ಓದಿರಿ.

ಯೋಗಿಗಳು ಕರ್ಮಗಳನ್ನು ಮಾಡುತ್ತಾರೆ ಆದರೆ ಅವರು ಅವುಗಳಿಗೆ ಅಂಟಿಕೊಂಡಿರುವುದಿಲ್ಲ. ಕರ್ಮಗಳಿಗೆ ಅತೀತವಾಗಿ ಇರುತ್ತಾರೆ. ಅವರಿಗೆ ಯಾವ ಕರ್ಮಗಳು ಅಂಟುವುದಿಲ್ಲ. ತಾವರೆ ಎಲೆಯ ಮೇಲಿನ ನೀರಿನ ಹನಿಗಳಂತೆ ಅಂಟಿಕೊಳ್ಳದೇ ಇರುತ್ತಾರೆ. ಎಂದರೆ ಯಾವುದೇ ವಿಷಯಗಳು ಅವರ ಮನಃಪಟಲದಲ್ಲಿ ಸಂಗ್ರಹವಾಗಿರುವುದಿಲ್ಲ. ಆದರೆ ನೀವು ಕರ್ಮಗಳನ್ನು ಮಾಡಿದರೆ ತಕ್ಷಣವೇ ನಿಮ್ಮ ಮನಃಪಟಲದಲ್ಲಿ ಸಂಗ್ರಹವಾಗುತ್ತಿವೆ.

ಉದಾಹರಣೆಗೆ, ನಿಮ್ಮ ಮೊಬೈಲ್ ನಲ್ಲಿಯ ಮೆಮೊರಿ ಕಾರ್ಡ್ ನಲ್ಲಿ ತುಂಬಾ ಹಾಡುಗಳನ್ನು ಸಂಗ್ರಹಿಸುತ್ತಾ ಇರುತ್ತೀರಲ್ವಾ. ನಾವು ಹೊಸ ಹಾಡುಗಳನ್ನು ಸಂಗ್ರಹಿಸಬೇಕೆಂದರೆ ಅದರಲ್ಲಿ ಖಾಲಿ ಸ್ಥಳವಿರಬೇಕು. ಇಲ್ಲದಿದ್ದರೆ ಸಂಗ್ರಹವಾದ ಹಳೆಯ ಹಾಡುಗಳನ್ನು ಡಿಲೀಟ್ ಮಾಡಬೇಕಲ್ವಾ! ಹಾಗೆಯೇ ನಮ್ಮ ಮನಸ್ಸು ಸಹ ಮೆಮೊರಿ ಕಾರ್ಡ್ ಇದ್ದಂತೆ. ಅದರಲ್ಲಿ ಸಂಗ್ರಹವಾದ ಅನಗತ್ಯವಾದವುಗಳನ್ನು ಡಿಲೀಟ್ ಮಾಡಬೇಕು, ಇದನ್ನೇ ನಾನು ದಗ್ಧಗೊಳಿಸುವುದು ಅಥವಾ ಜ್ಞಾನಾಗ್ನಿಯನ್ನು ಉತ್ಪತ್ತಿ ಮಾಡುವುದು ಎಂದು ಹೇಳುತ್ತಿದ್ದೇನೆ.

ಪ್ರಾಪಂಚಿಕವಾಗಿ ಮೊಬೈಲ್ ನಲ್ಲಿರುವ ಮೆಮೊರಿ ಕಾರ್ಡ್ ನ್ನು ಉದಾಹರಣೆಯಾಗಿ ಹೇಳಬಹುದು. ಆದರೆ ಆಧ್ಯಾತ್ಮಿಕವಾಗಿ ಗತ ಕರ್ಮಗಳನ್ನು ಡಿಲೀಟ್ ಮಾಡುವುದು ಹೇಗೆಂದು ತಿಳಿದುಕೊಳ್ಳಬೇಕು. ಯಾವುದನ್ನಾದರೂ ನೀವು ಸೃಷ್ಟಿಸಿದಾಗ ಅದನ್ನು ನೀವೇ ಮುನ್ನಡೆಸಬೇಕು ನಂತರ ಅದನ್ನು ನೀವೇ ನಾಶ ಗೊಳಿಸಬೇಕು. ನೀವು ಸೃಷ್ಟಿಸದೇ ಇದ್ದರೆ ನಾಶಪಡಿಸುವ ಅಗತ್ಯವೂ ಸಹ ಇರುವುದಿಲ್ಲ, ಎಂದರೆ ನೀವು ಪರಮಾತ್ಮ ಸ್ಥಿತಿಯಲ್ಲಿದ್ದು ಕರ್ಮಗಳನ್ನು ಮಾಡಿದರೆ ಅಂದರೆ ತ್ರಿಮೂರ್ತಿಗಳು ಒಂದಾದ ನಂತರ ಕರ್ಮಗಳನ್ನು ಮಾಡಿದರೆ ಅದು ಎಲ್ಲೂ ಸಂಗ್ರಹವಾಗುವುದಿಲ್ಲ.

ಕರ್ಮವನ್ನು ಮಾಡಿದರೂ ಸಹ ಅವು ನಮ್ಮೊಳಗೆ ಸಂಗ್ರಹವಾಗಬಾರದು ಎಂದರೆ ನಾವೇನು ಮಾಡಬೇಕು? ಎಂದರೆ ಮೊಬೈಲ್ ನಲ್ಲಿ ಎಲ್ಲಾ ಹಾಡುಗಳನ್ನು ಕೇಳಬೇಕು ಆದರೆ ಮೆಮೊರಿ ಕಾರ್ಡ್ ನಲ್ಲಿ ಎಲ್ಲೂ ಸಂಗ್ರಹವಾಗಬಾರದು ಎಂದರೆ ನೀವೇನು ಮಾಡಬೇಕು? ಇದಕ್ಕಾಗಿ, 24 ಗಂಟೆಗಳು ನಿಮಗೆ ಇಂಟರ್ನೆಟ್ ಕನೆಕ್ಷನ್ ಇದ್ದರೆ ಸಾಕಾಗುತ್ತದೆ. ಆಗ ನಾವು ಬಯಸಿದ ಹಾಡುಗಳನ್ನು ಕೇಳಬೇಕೆಂದೆನಿಸಿದಾಗ ಕೇಳಬಹುದು ಹಾಗೂ ಅವು ಮೆಮೊರಿ ಕಾರ್ಡ್ ನಲ್ಲಿ ಸಂಗ್ರಹವೂ ಸಹ ಆಗುವುದಿಲ್ಲ. ಇದನ್ನೇ ನಾನು ಕರ್ಮವನ್ನು ಮಾಡಿದರೂ ಸಹ ಅದಕ್ಕೆ ಅಂಟದೇ ಇರುವುದು ಅಥವಾ ದಗ್ಧ ಕರ್ಮಗಳು ಎಂದು ಹೇಳುತ್ತಿದ್ದೇನೆ.

ಅದೇ ರೀತಿ, ಜಗತ್ತನ್ನೆಲ್ಲಾ ಪರಮಾತ್ಮನು ವ್ಯಾಪಿಸಿದ್ದಾನೆ. ಎಲ್ಲಾದರೂ ಎಂದಾದರೂ ನಾವು ಅವನೊಂದಿಗೆ ಸಂಪರ್ಕವನ್ನೇರ್ಪಡಿಸಿಕೊಳ್ಳಬಹುದು, Wi Fi ಕನೆಕ್ಷನ್ ಇಟ್ಟುಕೊಂಡ ಹಾಗೆ. ಆದ್ದರಿಂದ ನೀವು ಯಾವಾಗಲೂ

ಅವನೊಂದಿಗೆ ಸಂಪರ್ಕವಿಟ್ಟುಕೊಂಡು ಕರ್ಮವನ್ನು ಮಾಡಬೇಕು. ಎಂದರೆ ದೈವದ ಸಂಗಡವಿದ್ದು ನೀವು ಏನೇ/ಯಾವುದೇ ಕರ್ಮವನ್ನು ಮಾಡಿದರೂ ಅಥವಾ ನಿರ್ದೇಶಕನಂತೆ ಇದ್ದು ಯಾವುದೇ ಪಾತ್ರವನ್ನು ಪೋಷಿಸಿದರೂ ಅವು ದಗ್ಧ ಕರ್ಮಗಳೇ ಆಗುತ್ತವೆ. ಎಂದರೆ ಪರಮಾತ್ಮನ ಶಕ್ತಿಯು ಸ್ವಚ್ಛವಾದ ರೂಪವನ್ನು ಧರಿಸುತ್ತದೆ ಮತ್ತು ಸ್ವಲ್ಪ ಸಮಯ ಇದ್ದು, ಕೆಲಸ ಮುಗಿದ ತಕ್ಷಣ ಸ್ವಚ್ಛಗೊಂಡು ಪುನಃ ಪರಮಾತ್ಮನಲ್ಲೇ ಬೆರೆತು ಹೋಗುತ್ತದೆ. ಮಧ್ಯೆದಲ್ಲಿ ಎಲ್ಲೂ ಸಹ ಸಂಗ್ರಹವಾಗುವುದಿಲ್ಲ. ಹೀಗೆ ಮಾಡುವುದರಿಂದಾಗಿ ನಿಮ್ಮ ಸಮಸ್ಯೆಗಳೆಲ್ಲವೂ ಮಾಯವಾಗಿ ಬಿಡುತ್ತವೆ. ಈ ಸಾಧನೆಯನ್ನು ನೀವು ಮಾಡಿ ನೋಡಿರಿ ಆಗ ಅದರ ವ್ಯತ್ಯಾಸ ನಿಮಗೆ ಅರ್ಥವಾಗುತ್ತದೆ.

ಅದೇ ರೀತಿ ದಗ್ಧ ಕರ್ಮಗಳನ್ನು ಮಾಡಿದರೆ ಪರಿಣಾಮಗಳು ಸಿಗುತ್ತವೆಂದು ಹೇಳಿದ್ದೇನೆಂದು, ತುಂಬಾ ಜನರು ಪರಿಣಾಮಗಳನ್ನು ಅಪೇಕ್ಷಿಸುತ್ತಾ ಸಾಧನೆಯನ್ನು ಮಾಡುತ್ತಿದ್ದಾರೆ. ಆದ್ದರಿಂದ ಅವರಿಗೆ ಪರಿಣಾಮಗಳು ಸಿಗುತ್ತಿಲ್ಲ. ಆದುದರಿಂದ ನೀವು ಅಪೇಕ್ಷಿಸುತ್ತಿರುವಾಗ ತಕ್ಷಣವೇ ಅದನ್ನು ಗುರುತಿಸಿ ನಾನು ಏನನ್ನೂ ಅಪೇಕ್ಷಿಸದೇ ಸಾಧನೆಯನ್ನು ಮಾಡುತ್ತೇನೆ ಅಥವಾ ಎಲ್ಲಾ ತರಹದ ಪರಿಣಾಮಗಳನ್ನು ಅಪೇಕ್ಷಿಸುತ್ತೇನೆ. ಅಥವಾ ಈ ಸಾಧನೆಯಿಂದ ಯಾವ ಪರಿಣಾಮ ಸಿಗುತ್ತದೋ ನನಗೆ ಗೊತ್ತಿಲ್ಲ, ಅದು ರಹಸ್ಯವಾಗಿರುವಂಥದ್ದು ಎಂದುಕೊಂಡು. ಆನಂತರ ಸಾಧನೆಯನ್ನು ಮುಂದುವರಿಸುತ್ತಾ ಏನು ಸಂಭವಿಸುತ್ತದೋ ಕಾದು ನೋಡಿರಿ.

ಸೃಷ್ಟಿ-ಸ್ಥಿತಿ-ಲಯ ಈ ಮೂರು ಏಕ ಕಾಲದಲ್ಲಿ ಸಂಭವಿಸಿದರೆ ಅವುಗಳನ್ನು ದಗ್ಧ ಕರ್ಮಗಳು ಎಂದು ಹೇಳುತ್ತಾರೆ. ದಗ್ಧ ಕರ್ಮಗಳು ನಿಮ್ಮಲ್ಲಿ ಸಂಗ್ರಹವಾಗದೇ ಇರುವುದರಿಂದ ಅವು ಪುನಃ ನಿಮ್ಮ ಬಳಿ ಮರಳಿ ಬರುವುದಿಲ್ಲ. ಒಂದು ವೇಳೆ ಆ ಕರ್ಮದ ಪರಿಣಾಮ ಮರಳಿ ಬಂದರೂ ಸಹ ಅದು ನಿಮ್ಮ ಮೇಲೆ ಯಾವ ಪ್ರಭಾವವನ್ನೂ ಬೀರುವುದಿಲ್ಲ. ಏಕೆಂದರೆ ಆಗ ನೀವು ಸ್ವಚ್ಛವಾಗಿರುತ್ತೀರಿ.

ಯಾವಾಗ ನೀವು ದಗ್ಧ ಕರ್ಮಗಳನ್ನು ಮಾಡುತ್ತೀರೋ ಆಗ ನೀವು ಅದ್ಭುತವಾದ ಪರಿಣಾಮಗಳನ್ನು ಪಡೆಯುತ್ತೀರಿ. ಅಲ್ಲಿಯವರೆಗೂ ಪರಿಣಾಮಗಳನ್ನು ಪಡೆಯುವುದು ಅಸಾಧ್ಯದ ಮಾತು. ಕರ್ಮ ಎಂದು ಭಾವಿಸಿದ ಎಲ್ಲದಕ್ಕೂ, ದಗ್ಧ-ಕರ್ಮಗಳನ್ನು ಮಾಡುವುದರಿಂದ ಪರಿಹಾರ ಲಭಿಸುತ್ತದೆ. ಏಕೆಂದರೆ ಶಿವನೂ ಸಹ ನಿಮ್ಮ ಜೊತೆಗೂಡಿರುವುದರಿಂದ ಖಂಡಿತವಾಗಿಯೂ ನಿಮಗೆ ಪರಿಹಾರ ಲಭಿಸುತ್ತದೆ. ಯಾವುದೇ ಸಮಸ್ಯೆಗಳಿಗಾದರೂ ಪರಿಹಾರ ದೊರಕಿದೆ ಎಂದುಕೊಳ್ಳಿರಿ, ಆಗಲೂ ಸಹ ನೀವು ಕರ್ಮ, ಹಣೆಬರಹ ಎಂದು ಹೇಳುತ್ತೀರಾ? ಹೇಳುವುದಿಲ್ಲ ತಾನೇ.

ನಿಮ್ಮ ಕರ್ಮಗಳೆಲ್ಲವೂ ದಹಿಸುತ್ತಿರುವಾಗ, ಸ್ವಚ್ಛವಾದ ಚಿಕ್ಕ ಮಗುವಿನಂತೆ ಬದಲಾಗಿ ಸಂತೋಷದಿಂದ ನಲಿಯುತ್ತಿರುತ್ತೀರಿ. ನಿಮ್ಮ ಪ್ರಸ್ತುತ ಸಮಸ್ಯೆಗಳು ಪರಿಹಾರಗೊಂಡಾಗ, ನಿಮ್ಮ ಗತದಲ್ಲಿ ಧರಿಸಿದ ಪಾತ್ರಗಳು ಅದನ್ನು ಗಮನಿಸುತ್ತವೆ. ಆ ಗತಜನ್ಮ ಪಾತ್ರಗಳೂ ಸಹ, "ಓಹೋ ನಾನು ಕೇವಲ ಬ್ರಹ್ಮ ಮತ್ತು ವಿಷ್ಣು ತತ್ವವನ್ನು ಮಾತ್ರ ಉಪಯೋಗಿಸಿಕೊಂಡಿದ್ದೇನೆ. ಆದರೆ ಶಿವ ತತ್ವವನ್ನು ಉಪಯೋಗಿಸಿಕೊಂಡಿಲ್ಲವೆಂದು" ಗ್ರಹಿಸಿ, ತಮ್ಮಷ್ಟಕ್ಕೆ ತಾವೇ ತಮ್ಮ ಕರ್ಮಗಳನ್ನು ದಗ್ಧ ಮಾಡಿಕೊಳ್ಳುತ್ತವೆ. ಈ ರೀತಿಯಾಗಿ ಸಂಗ್ರಹಿಸಲ್ಪಟ್ಟ ಹಳೆಯ ಕರ್ಮಗಳು ಸಹ ಈ ಜ್ಞಾನ-ಪ್ರೇರಣೆಯ ಮೂಲಕ ದಹಿಸಿ ದಗ್ಧವಾಗುತ್ತವೆ. ಹೀಗೆ ಮಾಡಿದರೆ ಒಟ್ಟಾರೆ ಕರ್ಮ ಚಕ್ರದಿಂದ ಹೊರಬಂದು, ಮುಕ್ತಿಯನ್ನು ಹೊಂದಿ ಸ್ವಚ್ಛವಾದ ಸ್ಥಿತಿಯಲ್ಲಿದ್ದು ಹಾಯಾಗಿ ಜೀವನವನ್ನು ಸುಖ ಸಂತೋಷದಿಂದ ಸಾಗಿಸುತ್ತೀರಿ.

ಆದುದರಿಂದ ಇಂದಿನಿಂದ ನೀವೂ ಸಹ ದಗ್ಧ ಕರ್ಮಗಳನ್ನು ಮಾಡಿರಿ. ಹೀಗೆ ಸಾಧನೆಯನ್ನು ಮುಂದುವರಿಸಿದರೆ ನೀವು ಸ್ವಚ್ಛವಾದ ಸ್ಥಿತಿಯನ್ನು ತಲುಪಿ, ಸ್ವಚ್ಛವಾದ ಶಕ್ತಿಯನ್ನು ಉಪಯೋಗಿಸಿಕೊಂಡು ಜೀವನವನ್ನು ಆನಂದದಿಂದ ಸಾಗಿಸುತ್ತೀರಿ. ಇದರಿಂದಾಗಿ ನೀವು ಸಿಲುಕಿಕೊಂಡಿರುವ ಪಾಪ-ಪುಣ್ಯ, ಕರ್ಮಗಳಿಂದ ಬಿಡುಗಡೆ ಹೊಂದಿ, ನಿಮ್ಮ ಬಾಹ್ಯ ಪರಿಸ್ಥಿತಿಗಳು ಹೇಗೇ ಇದ್ದರೂ ಅವುಗಳೊಂದಿಗೆ ನೀವು ಅಂಟಿಕೊಂಡಿರದೇ ಅಂತರಂಗದಲ್ಲಿ ಪ್ರಶಾಂತ ಸ್ಥಿತಿಯಲ್ಲಿರುತ್ತೀರಿ.

** ಇದನ್ನು ತೆಲುಗು ಭಾಷೆಯಿಂದ ಅನುವಾದಿಸಲ್ಪಟ್ಟಿದೆ. ತೆಲುಗು ಭಾಷೆಯಲ್ಲಿ ಓದಬೇಕೆಂದು ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಓದಬಹುದು.

http://darmam.com/downloads/telugutopics/7.dagdakarmalu.pdf

** ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಅನ್ನು ಕನ್ನಡದಲ್ಲಿ ಕೇಳಬೇಕೆಂದು (To Listen) ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಕೇಳಬಹುದು (Listen)

https://www.youtube.com/playlist?list=PL7sfndcUtXfluvXK-CsihXrxGyyljh8n6

** ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಅನ್ನು ತೆಲುಗು, ಇಂಗ್ಲೀಷ್, ಕನ್ನಡ, ಹಿಂದಿ ಭಾಷೆಯಲ್ಲಿ ಓದಬೇಕೆಂದು ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಓದಬಹುದು. http://darmam.com/library.html

**ಈ ಕೆಳಗಿನ ಲಿಂಕನ್ನು ಕ್ಲಿಕ್ ಮಾಡಿ ಆಡಿಯೋಗಳನ್ನು ಕೇಳಿದರೆ ಮತ್ತು ಟಾಪಿಕ್ ಗಳನ್ನು ಓದಿದರೆ ನಿಮಗೆ ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಸ್ಪಷ್ಟವಾಗಿ ಅರ್ಥವಾಗುತ್ತದೆ. http://darmam.com/important-topics.html

**ಕಾಣಿಕೆಗಳು-Donations**

ಈ ನ್ಯೂ ಎನರ್ಜಿ ಕಾನ್ಸೆಪ್ಟ್ ನ್ನು ಆಚರಿಸಿ ಲಾಭ ಪಡೆದವರು ಅಥವಾ ಮತ್ತಾರಾದರೂ ಕಾಣಿಕೆಗಳನ್ನು ನೀಡಬಯಸುವವರು ಈ ಕೆಳಗೆ ತಿಳಿಸಿರುವ ಬ್ಯಾಂಕ್ ಖಾತೆಗೆ ಹಣವನ್ನು ಪಾವತಿಸಬಹುದು. ನಿಮ್ಮ ಸಹಾಯದಿಂದ ನ್ಯೂ ಎನರ್ಜಿ ಜ್ಞಾನವನ್ನು ಅತ್ಯಧಿಕ ಜನರಿಗೆ ತಲುಪಿಸಲು ನಮಗೆ ಪ್ರೋತ್ಸಾಹವನ್ನುಂಟು ಮಾಡುತ್ತದೆ. A/C DETAILS: P.SREEDHAR, STATE BANK OF INDIA, HANUMAKONDA BRANCH, IFSC CODE: SBIN0003422 A/C No: 30603897922.MOBILE No: 9390151912 - THIS NUMBER ALSO HAS GooglePay AND PhonePe